**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.  ದಿನಾಂಕಃ 28-06-2022.**

**ಪಾಟೀ ಸವಾಲು ಪ್ರತಿವಾದಿಯ ಪರ ವಕೀಲರಿಂದ :**

1) ದಾವಾ ಆಸ್ತಿ ರಂಗನಾಥಪುರ ಗ್ರಾಮದಲ್ಲಿ ಇರುತ್ತದೆ. ದಾವಾ ಆಸ್ತಿ ನಮ್ಮ ತಂದೆ ಮುನಿಶಾಮಪ್ಪನದ್ದು. ನಮ್ಮ ತಂದೆ ತೀರಿ ಹೋಗಿರುತ್ತಾರೆ. ದಾವಾ ಆಸ್ತಿ ಸರ್ಕಾರದಿಂದ ನಮ್ಮ ತಂದೆಗೆ ಬಂದಿರುತ್ತದೆ. ನಮ್ಮ ತಂದೆಗೆ ಮಂಜೂರಾಗಿತ್ತಾ? ಎಂದರೆ ಹೌದು ಎಂದು ಹೇಳುತ್ತಾರೆ. ಮಂಜೂರಾತಿ ಆದ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ ಎಂದರೆ ಸರಿಯಲ್ಲ, ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ನನ್ನ ಬಳಿಯಿದ್ದ ಎಲ್ಲಾ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ನನ್ನ ಬಳಿ ಬೇರೆ ದಾಖಲೆ ಇಲ್ಲ.

2) ನಾರಾಯಣಪ್ಪ ನಮ್ಮ ಚಿಕ್ಕಪ್ಪ ಎಂದರೆ ಸರಿ. ಸದರಿ ನಾರಾಯಣಪ್ಪನ ಹೆಂಡತಿ ಭಾಗ ಕೋರಿ ದಾವೆ ಸಂಖ್ಯೆ 512/2007 ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ಒಟ್ಟು ಕುಟುಂಬದ ಸ್ವತ್ತು ಎಂದು ತೋರಿಸಲು ದಾಖಲೆ ಇಲ್ಲ ಎಂದು ವಜಾ ಮಾಡಿದ್ದರು ಎಂದರೆ ಸರಿ. ನನ್ನ ತಾತನ ಹೆಸರು ಹನುಮಂತರಾಯಪ್ಪ. ನಮ್ಮ ತಂದೆ ನಮಗೆ ದಾನಪತ್ರ ಬರೆದುಕೊಟ್ಟರು. ನಮ್ಮ ತಂದೆಯ ಹೆಸರಿನಲ್ಲಿ ದಾವಾ ಆಸ್ತಿ ಇರಲಿಲ್ಲ ಎಂದರೆ ಸರಿಯಲ್ಲ. ಗ್ರಾಮಲೆಕ್ಕಾಧಿಕಾರಿ ಜೊತೆ ಶಾಮೀಲಾಗಿ ನನ್ನ ತಂದೆ ಖಾತೆಯನ್ನು ಮಾತ್ರ ಮಾಡಿಸಿಕೊಂಡಿದ್ದರು ಅವರ ಹೆಸರಿನಲ್ಲಿ ಯಾವುದೇ ಮೂಲ ದಾಖಲೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರಿನಲ್ಲಿ ಖಾತೆ ಇದ್ದರು ಆತ ಯಾವತ್ತು ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ದಾನಪತ್ರ ಮಾಡಿಕೊಂಡ ಮೇಲೆ ನಾನು ಸಹ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

**3)** ನಾನು ನಾರಾಯಣಪುರದಲ್ಲಿ ವಾಸವಾಗಿದ್ದೇನೆ ಎಂದರೆ ಸರಿ. ನನ್ನ ತಂದೆ ಮಳ್ಳೂರಿನಲ್ಲಿ ವಾಸವಾಗಿದ್ದರು ಎಂದರೆ ಸರಿ. ನಾನು ಹುಟ್ಟಿ ಬೆಳೆದಿದ್ದು ಮಳ್ಳೂರಿನಲ್ಲಿ. ಮಳ್ಳೂರಿನಲ್ಲಿ ತೋಪಣ್ಣನ ಮಗ ಮುನಿಸ್ವಾಮಪ್ಪ ಇದ್ದರು ಎಂದರೆ ಆತನನ್ನು ನಾನು ನೋಡಿಲ್ಲ ಎಂದು ಹೇಳುತ್ತಾರೆ. ಸದರಿ ತೋಪಣ್ಣ ದಾವಾ ಆಸ್ತಿಯನ್ನು ದಿನಾಂಕ: 28-10-1936 ರಲ್ಲಿ ಕ್ರಯಕ್ಕೆ ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ತೋಪಣ್ಣ ಕಂದಾಯ ಕಟ್ಟಲಿಲ್ಲ ಎಂದು ಸದರಿ ಆಸ್ತಿಯನ್ನು ಹರಾಜಿಗೆ ತಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ಆಗ ಹರಾಜಿನಲ್ಲಿ ಯಾರು ಕೊಂಡುಕೊಳ್ಳುವವರು ಇಲ್ಲದೆ ಇರುವುದರಿಂದ ಸರ್ಕಾರದವರು ಪಡ ಎಂದು ತೀರ್ಮಾನಿಸಿದ್ದರು ಎಂದರೆ ಗೊತ್ತಿಲ್ಲ. ತೋಪಣ್ಣನ ಮಗ ಮುನಿಶಾಮಪ್ಪ ಮತ್ತು ನಮ್ಮ ತಂದೆ ಒಂದೇ ಹೆಸರಿನವರು ಎಂದರೆ ಸರಿ. ನಮ್ಮ ತಂದೆಯ ಹೆಸರು ಮತ್ತು ಸದರಿ ತೋಪಣ್ಣನ ಮಗನ ಹೆಸರು ಒಂದೇ ಇರುವುದರಿಂದ ನಾಗರಾಜ್ ಎಂಬ ಗ್ರಾಮಲೆಕ್ಕಾಧಿಕಾರಿ ಜೊತೆ ಸೇರಿ ನಮ್ಮ ತಂದೆಯ ಹೆಸರಿಗೆ ಖಾತೆ ಮಾಡಿಸಿಕೊಂಡರು ಎಂದರೆ ಸರಿಯಲ್ಲ. ಸದರಿ ಮುನಿಶಾಮಪ್ಪನ ಮಗ ಶ್ರೀನಿವಾಸಯ್ಯ ಬ್ಯಾಂಕ್ ಮ್ಯಾನೇಜರ್ ಆಗಿದ್ದರು ಎಂದರೆ ಸರಿ. ಅವರಿಗೆ ಪ್ಯಾರಲೀಸಸ್ ಸ್ಟ್ರೋಕ್ ಆಯಿತು ಎಂದರೆ ನನಗೆ ಗೊತ್ತಿಲ್ಲ. ಅದರ ದೆಸೆಯಿಂದ ಅವರು ಓಡಾಡಲು ಆಗುವುದಿಲ್ಲ ಎಂದರೆ ಗೊತ್ತಿಲ್ಲ. ಅವರು ವಿ.ಆರ್.ಎಸ್. ತೆಗೆದುಕೊಂಡು ಯಲಹಂಕದಲ್ಲಿ ವಾಸವಾಗಿದ್ದಾರೆ ಎಂದರೆ ಗೊತ್ತಿಲ್ಲ.

**4)** ಜಮೀನಿನಲ್ಲಿ ಈಗ ಕಂಬಳಿ ಗಿಡ ಇರುತ್ತದೆ. ಸದರಿ ರೇಷ್ಮೆ ಗಿಡವನ್ನು ಪ್ರತಿವಾದಿ ಬೆಳೆದು ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯು ಪಡ ಎಂಬುವುದನ್ನು ರದ್ದು ಮಾಡಿ ಕೋರಿದ ಅರ್ಜಿ ಸ್ವೀಕೃತವಾಗಿ ಈಗ ಅವರ ಹೆಸರಿನಲ್ಲಿ ಖಾತೆ ಆಗಿದೆ ಎಂದರೆ ಗೊತ್ತಿಲ್ಲ. ಬೋರಿನಿಂದ ನೀರು ಹಾಯಿಸುತ್ತೇವೆ. ದಾವಾ ಆಸ್ತಿಯಲ್ಲಿ ಬೋರು ಇಲ್ಲ ನಮ್ಮ ತಂದೆಯ ಜಮೀನಿನಿಂದ ನೀರು ತಂದು ಹಾಯಿಸುತ್ತೇವೆ.

5) ದಾವಾ ಆಸ್ತಿಯಲ್ಲಿ ಪ್ರತಿವಾದಿ ಬೆಳೆ ಬೆಳೆಯುತ್ತಿದ್ದಾರೆ ನಾನು ಬೆಳೆಯುತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮಾಲೀಕರು ಮತ್ತು ಸ್ವಾಧೀನದಾರರು ಪ್ರತಿವಾದಿಯೇ ಹೊರತು ನಾನು ಅಲ್ಲ ಎಂದರೆ ಸರಿಯಲ್ಲ. ನಾನು ಯಾವತ್ತು ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ನಮ್ಮ ತಂದೆಗೆ ಭಾಗದಲ್ಲಿ ಬಂದ ಆಸ್ತಿಯ ಪಕ್ಕದಲ್ಲಿರುವುದರಿಂದ ಸುಳ್ಳು ದಾಖಲೆ ಸೃಷ್ಟಿಸಿ ನನ್ನ ಹೆಸರಿಗೆ ಸುಳ್ಳು ದಾನಪತ್ರ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ಕಂದಾಯ ಕಟ್ಟಿದ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. ನಾನು ಯಾವುದೇ ಕಂದಾಯವನ್ನು ಕಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯೇ ದಾವಾ ಆಸ್ತಿಯನ್ನು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

6) **ಮರು ವಿಚಾರಣೆ ಇಲ್ಲ.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**